ಮಾಡಲಾಗಿದೆ. ಅದರಲ್ಲಿ, ಸೂಪರಿಂಟೆಂಡೆಂಟ್ ಆಫ್ ಪೋಲಿಸ್, ಟೌನ್ ಮುನಿಸಿಪಲ್ ಅಧ್ಯಕ್ಷರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಕಾರ್ಯನಿರ್ವಾಹಕ ಅಭಿಯಂತರು ಮತ್ತು ಇಬ್ಬರು ಸ್ಥಳೀಯ ಸದಸ್ಯರು ಇರುತ್ತಾರೆ.

ವಿರಾಜಪೇಟೆ ತಾಲ್ಲೂಕಿನ ಸೇತುವೆಗಳ ದುಸ್ಥಿತಿ

2487 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಟಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ಸೇತುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಾಲಿನಲ್ಲಿ ಎಷ್ಟು ಸೇತುವೆಗಳನ್ನು ಪುನರ್ ನಿರ್ಮಿಸಲು ಸರ್ಕಾರದವರು ಆದೇಶ ಹೊರಡಿಸಿರುವರು ಹಾಗೂ ಇವುಗಳಿಗೆ ಮೀಸಲಿಟ್ಟ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿರುವ 49 ಸೇತುವೆಗಳ ಪೈಕಿ 30 ಸೇತುವೆಗಳು ಹಳೆಯದಾಗಿದ್ದರೂ ವಾಹನ ಸಂಚಾರಕ್ಕೆ ಯೋಗ್ಯವಾಗಿವೆ. ಇವುಗಳು ಹಳೆಯದಾಗಿರುವುದರಿಂದ ಹಾಗೂ ಕಿರಿದಾಗಿರುವುದರಿಂದ ಸುಧಾರಣೆ ಸಾಧ್ಯವಿಲ್ಲದಿದ್ದು ಪುನರ್ ನಿರ್ಮಾಣ ಮಾಡಬೇಕಿದೆ.

ಆ) ಈ ಸಾಲಿನಲ್ಲಿ ಯಾವುದೇ ಸೇತುವೆಯ ಪುನರ್ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ. ಹಾಗೂ ಹಣವನ್ನು ಮೀಸಲಿಟ್ಟಿರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ಸೇತುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೇನೆ. ಉತ್ತರದಲ್ಲಿ, ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿರುವ 49 ಸೇತುವೆಗಳ ಪೈಕಿ 30 ಸೇತುವೆಗಳು ಹಳೆಯದಾಗಿದ್ದರೂ ವಾಹನ ಸಂಚಾರಕ್ಕೆ ಯೋಗ್ಯವಾಗಿವೆ ಎಂದು ಹೇಳಿದ್ದಾರೆ. ಅವುಗಳಲ್ಲಿ ಮೂವತ್ತು ಸೇತುವೆಗಳ ದುಸ್ಥಿತಿ ಹೇಗಿದೆ ಎಂದು ವರ್ಣಿಸುವುದಕ್ಕೆ ನನ್ನಿಂದ ಸಾಧ್ಯವಾಗುತ್ತಿಲ್ಲ. ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಈಗಾಗಲೇ ರಾಜ್ಯ ಹೆದ್ದಾರಿಯಲ್ಲಿರುವ ಒಂದು ಸೇತುವೆ ಕುಸಿದು ಹೋಗಿ ನಾಲ್ಕು ದಿವಸಗಳಾಯಿತು, ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೇ? ಇದು ನನ್ನ ಮೊದಲ ಉಪ ಪ್ರಶ್ನೆಯಾಗಿದೆ. ಇದಕ್ಕೆ ದಯವಿಟ್ಟು ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ, ಈ ಸಾಲಿನಲ್ಲಿ ಎಷ್ಟು ಸೇತುವೆಗಳನ್ನು ಪುನರ್ ನಿರ್ಮಿಸಲು ಸರ್ಕಾರದವರು ಆದೇಶ ಹೊರಡಿಸಿರುವರು ಹಾಗೂ ಇವುಗಳಿಗೆ ಮೀಸಲಿಟ್ಟ ಹಣವೆಷ್ಟು ಎಂದು ಕೇಳಿದ್ದೇನೆ ಅದಕ್ಕೆ, ಈ ಸಾಲಿನಲ್ಲಿ ಯಾವುದೇ ಸೇತುವೆಯ ಪುನರ್ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ ಹಾಗೂ ಹಣವನ್ನು ಮೀಸಲಿಟ್ಟಿರುವುದಿಲ್ಲವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಮೂವತ್ತು ಸೇತುವೆಗಳು ಹಳೆಯದಾಗಿವೆ ಎನ್ನುವುದನ್ನು ಸರ್ಕಾರ ಒಪ್ಪಿಕೊಂಡಿದೆ. ನಾಲ್ಕು ದಿವಸಗಳ ಹಿಂದೆ ರಾಜ್ಯ ಹೆದ್ದಾರಿಯಲ್ಲಿ ಒಂದು ಸೇತುವೆ ಕುಸಿದು ಹೋಗಿರುವುದರಿಂದ ಇವತ್ತು ಬಹಳ ದುಸ್ಥಿತಿಯಲ್ಲಿ ಅಲ್ಲಿ ಪ್ರಯಾಣ ಮಾಡುತ್ತಿದ್ದೇವೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಆ ಮೂವತ್ತು ಸೇತುವೆಗಳಲ್ಲಿ ಒಂದಕ್ಕೂ ಇವರು ಪ್ರಾವಿಷನ್

ಇಟ್ಟಿಲ್ಲ. ಅದರ ಜೊತೆಗೆ ಒಂದು ಸೇತುವೆ ಕುಸಿದು ಹೋಗಿದೆ. ಇದಕ್ಕೆ ಸಚಿವರು ಯಾವ ರೀತಿ ಉತ್ತರವನ್ನು ಹೇಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಕೊಡಗು ಜಿಲ್ಲೆಯ ಈ ವಿರಾಜಪೇಟೆ ತಾಲ್ಲೂಕಿನಲ್ಲಿ ಸುಮಾರು 49 ಸೇತುವೆಗಳಿವೆ. ರಾಜ್ಯ ಹೆದ್ದಾರಿಯಲ್ಲಿ 26, ಜಿಲ್ಲಾ ಹೆದ್ದಾರಿಯಲ್ಲಿ 20 ಸೇತುವೆಗಳಿವೆ. ರಾಜ್ಯ ಹೆದ್ದಾರಿಯಲ್ಲಿ ಭಾರವನ್ನು ಹೊರತಕ್ಕಂಥ 6 ಮೀಟರ್ ನಿಂದ 12 ಮೀಟರ್ ನವರೆಗಿನ 16 ಸೇತುವೆಗಳು ಮತ್ತು ಜಿಲ್ಲಾ ಹೆದ್ದಾರಿಯಲ್ಲಿ 6 ಮೀಟರ್ನಿಂದ 12 ಮೀಟರ್ ವರೆಗಿನ 11 ಚಿಕ್ಕ ಸೇತುವೆಗಳಿವೆ. ಈ ಚಿಕ್ಕ ಸೇತುವೆಗಳು ಬಹಳ ಹಳೆಯ ಸೇತುವೆಗಳು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಈ ಸೇತುವೆಗಳು ದುರಸ್ಥಿ ಮಾಡುವುದಕ್ಕೆ ಬರುವಂಥವುಗಳಲ್ಲ, ಇವನ್ನು ಹೊಸದಾಗಿ ನಿರ್ಮಾಣ ಮಾಡಬೇಕಾಗಿರುವುದರಿಂದ, ಹಣಕಾಸಿನ ಲಭ್ಯತೆಯ ಮೇಲೆ ತೆಗೆದುಕೊಳ್ಳಬೇಕಾಗಿದೆ. ರಾಜ್ಯ ಹೆದ್ದಾರಿಯಲ್ಲಿ ನಾಲ್ಕು ದಿವಸಗಳ ಹಿಂದೆ ಒಂದು ಸೇತುವೆ ಕುಸಿದಿದೆ ಎಂದು ಇವರು ಹೇಳಿದ್ದಾರೆ. ಆದರೆ ಈ ಅತೀ ಸಣ್ಣ ಸೇತುವೆಗಳೇನಿವೆ. ಇವುಗಳು ಕುಸಿದಾಗಲೂ ಕೂಡ ಡೀವಿಯೇಷನ್ ಮಾಡಿ ಕೆಲಸಗಳನ್ನು ಪ್ರಾರಂಭ ಮಾಡಬಹುದು. ಆದರೆ ಇವನ್ನು ಹೊಸದಾಗಿ ರಿಪ್ಲೇಸ್ ಮಾಡಬೇಕೆಂದರೆ ಹೊಸದಾಗಿ ಕಟ್ಟಬೇಕು, ಇವು ರಿಪೇರಿ ಮಾಡುವುದಕ್ಕೆ ಬರುವ ಸೇತುವೆಗಳಲ್ಲ. ಇವನ್ನು ಹಣಕಾಸಿನ ಲಭ್ಯತೆಯ ಮೇಲೆ ಮುಂದಿನ ವರ್ಷ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ನಾಲ್ಕು ದಿವಸಗಳ ಹಿಂದೆ ಒಂದು ಸೇತುವೆ ಕುಸಿದಿದೆ ಎಂದು ಹೇಳಿದ್ದೀರಲ್ಲಾ ಅದರ ಬಗ್ಗೆ ತೀವ್ರ ಗಮನಹರಿಸಿ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಕೂಡಲೇ ಕೆಲಸವನ್ನು ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರೆ, ಬಹಳ 'ಧನ್ಯವಾದಗಳು' ಈಗ ನಾನು ಹೇಳುವುದೇನೆಂದರೆ, ಇವರು, ಕಿರು ಚಿಕ್ಕ ಸೇತುವೆ ಎಂದು ಹೇಳುತ್ತಿದ್ದಾರೆ, ಅಲ್ಲಿ ಕುಸಿದಿರುವುದು ರಾಜ್ಯ ಹೆದ್ದಾರಿಯ ಒಂದು ಸೇತುವೆ. ಅರ್ಧಂಬರ್ಧ ಕುಸಿದಿದೆ, ಇನ್ನೂ ಈಗ ಅರ್ಧ ಜಾಗದಲ್ಲಿ ಹೇಗೋ ಓಡಾಡಲಾಗುತ್ತಿದೆ.

ಅಧ್ಯಕ್ಷರು : ಕೂಡಲೇ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು : ಧನ್ಯವಾದಗಳು, ಇನ್ನೊಂದು ಉಪಪ್ರಶ್ನೆ ಇದೆ. ನನ್ನ ಕ್ಷೇತ್ರದಲ್ಲಿ 127 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಗಳಿವೆ. ಸರ್ಕಾರದ ನಿಯಾವಳಿಯ ಪ್ರಕಾರ ಒಂದು ರಸ್ತೆಯ ಅಗಲ ಕನಿಷ್ಟ ಐದರಿಂದ ಐದೂವರೆ ಮೀಟರ್ ಮೇಲೆ ಇರಬೇಕು, ಆದರೆ ಇದು ಮೂರರಿಂದ ಮೂರೂವರೆ ಮೀಟರ್ ಅಗಲ ಮಾತ್ರವಿದೆ. ಆದರೆ ಸರ್ಕಾರ ಆ ನಿಟ್ಟಿನಲ್ಲಿ ಸ್ವಲ್ಪವೂ ಕೂಡ ಯೋಚನೆ ಮಾಡಿಲ್ಲ. 127 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಮಾಡಿದ್ದಾರೆ. ಆದರೆ ಸ್ಟ್ಯಾಂಡರ್ಡ್ ಮೇಂಟೈನ್ ಮಾಡುವುದನ್ನು ಇಮುವರೆವಿಗೂ ಕೂಡ ಮಾಡುತ್ತಿಲ್ಲ. ಸರ್ಕಾರ ಅದರ ಬಗ್ಗೆ ಗಮನಹರಿಸಿದೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. 1995ರ ಡಿಸೆಂಬರ್ ಒಳಗಡೆ ರಾಜ್ಯದಲ್ಲಿರುವ ಎಲ್ಲಾ ಗುಂಡಿಗಳನ್ನು ನಾವು ಮುಚ್ಚುತ್ತೇವೆ, ಇಲ್ಲವೆಂದರೆ ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರನ್ನು ಅಮಾನತ್ತಿನಲ್ಲಿಡುತ್ತೇವೆಂದು ಕಳೆದ ವರ್ಷ ಹೇಳಿದ್ದರು. ನನ್ನ ಕ್ಷೇತ್ರದಲ್ಲಿ ತೊಂಬತ್ತೈದು ಆಯಿತು, ತೊಂಭತ್ತಾರು ಆಗಸ್ಟ್ ತಿಂಗಳಿಗೆ ಬಂದಿದ್ದೇವೆ. ಅಲ್ಲಿ ರಸ್ತೆಗಳು ಎಲ್ಲಿವೆ ಎನ್ನುವುದನ್ನು ಹುಡುಕಬೇಕು, ಬರೀ ಗುಂಡಿಗಳಿವೆ ಇದರ ಬಗ್ಗೆ ಸರ್ಕಾರ ಏನು ಗಮನವನ್ನು ಕೊಡುತ್ತದೆ

ಎನ್ನುವುದನ್ನು ಹೇಳಬೇಕು. ಕೊನೆಯದಾಗಿ ಒಂದೇ ಒಂದು ಚಿಕ್ಕ ಪ್ರಶ್ನೆ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಅಂದರೆ ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿರಬೇಕಾದ ಅಭಿಯಂತರರು ನೇಮಕವಾಗಿಲ್ಲ. ಇವತ್ತು ನಾಲ್ಕು ಜನರಿದ್ದಾರೆ ಅವರಲ್ಲಿ ಒಬ್ಬರು ಒಂದು ತಿಂಗಳಿನಿಂದ ರಜದಲ್ಲಿದ್ದಾರೆ, ಅಲ್ಲಿ ಈ ರೀತಿಯ ಒಂದು ಅವ್ಯವಸ್ಥೆಯ ಆಗರವಾಗಿದೆ.

ಅಧ್ಯಕ್ಷರು : ಪ್ರಶ್ನೆಗೆ ಸಂಬಂಧಿಸಿದಷ್ಟೆ ಹೇಳಿ, ಅವೆಲ್ಲಾ ಬೇಡ.

ಶ್ರೀ ಹೆಚ್.ಡಿ. ಬಸವರಾಜು : ಲೋಕೋಪಯೋಗಿ ಇಲಾಖೆಯವರು ಸಮರ್ಪಕವಾದ ಕೆಲಸ ಮಾಡುತ್ತಿಲ್ಲ, ಆದ್ದರಿಂದ, ಆ ಡಿವಿಜನ್ನೇ ಮುಚ್ಚಿಬಿಡಿ ಎಂದು ಹೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂತೆ ರಾಜ್ಯ ಹೆದ್ದಾರಿಯಲ್ಲಿರುವ ಮೂರುವರೆ ಮೀಟರ್ ರಸ್ತೆಯ ಎರಡು ಬದಿಗೆ ಒಂದೊಂದು ಮೀಟರ್ ವಿಸ್ತರಣೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವಾಗ ಮಾತ್ರ ಏಳು ಮೀಟರ್‌ಗಳ ರಸ್ತೆಗಳನ್ನು ಮಾಡಿದ್ದಾರೆಯೇ ಹೊರತು, ಮೊದಲು ಇದ್ದ ಕೆಲವು ರಸ್ತೆಗಳ ವಿಸ್ತರಣೆ ಆ ರೀತಿಯಾಗಿಲ್ಲ, ಅದನ್ನು ಸರಿಪಡಿಸುವಂಥ ಕೆಲಸವನ್ನು ಹಣಕಾಸಿನ ಅಗತ್ಯತೆಯ ಮೇಲೆ ಮಾಡಬೇಕಾಗುತ್ತದೆ. ಈಗ ಅವರು ಗುಂಡಿಗಳನ್ನು ಮುಚ್ಚಬೇಕಾದ ಕೆಲಸ ಸಂಪೂರ್ಣವಾಗಿ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಗುಂಡಿಗಳನ್ನು ಮುಚ್ಚುವಂಥ ಟಾರ್ ಕೆಲಸವಾದರೆ ಈಗ ಅಕ್ಟೋಬರ್ ನಂತರ ಮಳೆಗಾಲ ಕಳೆದ ನಂತರ ಈ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಸದ್ಯ ರಸ್ತೆಗಳ ಸುಧಾರಣೆಯ ಮಟ್ಟಿಗೆ ಕ್ರೋಢೀಕರಣ ಮಾಡಿ ವ್ಯವಸ್ಥೆ ಮಾಡುವುದಕ್ಕೆ ಹೇಳುತ್ತೇನೆ. ಅವರು, ಅಲ್ಲಿ ಕೆಲವು ಅಧಿಕಾರಿಗಳು ಇಲ್ಲವೆಂದು ಹೇಳುತ್ತಿದ್ದಾರೆ, ಇವತ್ತು ಅಲ್ಲಿನ ಅಧಿಕಾರಿಗಳು ಇಲ್ಲದೇ ಇದ್ದರೆ ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ನಾಡ ತಳಿಗಳನ್ನು ಉಳಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳು

2646 - ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಳ್ಳಿಕಾರ್ ತಳಿ ಮತ್ತು ಅಮೃತ್ ಮಹಲ್ ಮತ್ತು ಕೃಷ್ಣ ಇನ್ನಿತರೆ ನಾಡ ತಳಿಗಳನ್ನು ಉಳಿಸಿಕೊಳ್ಳಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಈ ನಾಡ ತಳಿಗಳು ಇಲ್ಲದಿದ್ದರೆ ಕೃಷಿ ಕ್ಷೇತ್ರಕ್ಕೆ ಅಪಾಯವಾಗುವುದಿಲ್ಲವೇ?

ಇ) ಈ ತಳಿಗಳನ್ನು ಹೆಚ್ಚು ಮಾಂಸಕ್ಕೆ ಉಪಯೋಗಿಸುತ್ತಿರುವುದರಿಂದ, ಅದನ್ನು ತಡೆದು ಈ ತಳಿಯ ಅಭಿವೃದ್ಧಿಯನ್ನು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) ಈ ತಳಿಗಳ ಸಂವರ್ಧನೆ ಮತ್ತು ಅಭಿವೃದ್ಧಿಗಾಗಿ ತಳಿ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

2) ತಳಿ ಅಭಿವೃದ್ಧಿಗೆ ಪೂರಕವಾಗುವಂತೆ ಅವಶ್ಯವಾದ ಕಡೆಗಳಲ್ಲಿ ಉತ್ತಮ ಘನೀಕೃತ ವೀರ್ಯವನ್ನು ಸರಬರಾಜು ಮಾಡಲಾಗುತ್ತಿದೆ.